**ಕರ್ನಾಟಕ ಸರ್ಕಾರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ:ಸಿ8(5)ಶಾಶಿಅಹೆಶಿ/37/2017-18

ದಿನಾಂಕ: 17.08.2017

**ಜ್ಞಾಪನ**

ವಿಷಯ: 2017-18ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಗುರುತಿಸಿ ಕಾರ್ಯಭಾರವಿರುವ ಅನುದಾನಿತ ಪ್ರೌಢಶಾಲೆಗಳಿಗೆ ಮರುಹೊಂದಾಣಿಕೆ ಮಾಡುವ ಕುರಿತು.

ಉಲ್ಲೇಖ:1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 200 ಪಿಎಂಸಿ 99, ದಿ: 03.02.2000.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಎಸ್.ಎಲ್.ಬಿ 2001 ದಿ: 16.01.2001.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 137 ಎಸ್ಇಪಿ 2000, ದಿ: 23.01.2002.
4. ಸರ್ಕಾರದ ಆದೇಶ ಸಂಖ್ಯೆ ಇಡಿ 69 ಎಸ್ಓಹೆಚ್ 2011, ದಿನಾಂಕ:31.03.2011.
5. ಈ ಕಛೇರಿಯ ಮುಂದುವರೆದ ಸೂಚನೆಗಳ ಸಂಖ್ಯೆ: ಸಿ8[7] ಶಾಶಿಅ ಹೆಚ್ಚುವರಿ ಹೆ ಶಿ/75/2009-10 ದಿನಾಂಕ: 01.10.2011 ಮತ್ತು 14.12.2011
6. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ8[1] ವರ್ಗ ಅನು 26/2015-16 ದಿನಾಂಕ: 28.02.2017.
7. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಎಸ್.ಇ.ಪಿ 2011, ದಿ: 16.07.2014.
8. ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 28.06.2017

****************

ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿಗಧಿತ ಕಾರ್ಯಭಾರವಿಲ್ಲದ ಶಿಕ್ಷಕರುಗಳನ್ನು ಹೆಚ್ಚುವರಿ ಎಂದು ಗುರುತಿಸಿ ಕಾರ್ಯಭಾರವಿರುವ ಅನುದಾನಿತ ಪ್ರೌಢಶಾಲೆಗಳಿಗೆ ಮರು ಹೊಂದಾಣಿಕೆ ಮಾಡುವ ಬಗ್ಗೆ ಉಲ್ಲೇಖ [8]ರಲ್ಲಿ ಈ ಕಛೇರಿಯಿಂದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಮೇಲ್ಕಂಡ ಉಲ್ಲೇಖ [8]ರ ಸುತ್ತೋಲೆಯಲ್ಲಿ ಹೆಚ್ಚುವರಿ ಶಿಕ್ಷಕರ ಸ್ಥಳಾಂತರದ ಪ್ರಕ್ರಿಯೆಗೆ ಮತ್ತು ವಿವಿಧ ವಿಚಾರಗಳಿಗೆ ಸಂಬಂಧಿಸಿದಂತೆ ಕ್ರೋಢೀಕೃತ ಮಾಹಿತಿಯನ್ನು ಪಡೆಯುವ ಸಲುವಾಗಿ 1 ರಿಂದ 4ರವರೆಗೆ ಅನುಬಂಧಗಳನ್ನು ನಿಗಧಿಪಡಿಸಿ ಎಲ್ಲಾ ಉಪನಿರ್ದೇಶಕರು ಈ ಅನುಬಂಧಗಳಲ್ಲಿ ನಿರ್ಧಿಷ್ಠಪಡಿಸಿದ ತಂತ್ರಾಂಶದಲ್ಲಿ ಮಾಹಿತಿ ಒದಗಿಸಲು ತಿಳಿಸಲಾಗಿತ್ತು. ಈ ಕುರಿತು ಬೋದಕೇತರ ಸಿಬ್ಬಂದಿಯ ಮಾಹಿತಿಯನ್ನೂ ಸಹ ಉಲ್ಲೇಖ [8]ರ ಸುತ್ತೋಲೆಯೊಂದಿಗೆ ಲಗತ್ತಿಸಿದ ಅನುಬಂಧ-1 ರಿಂದ 4 ರಲ್ಲಿ ಒದಗಿಸುವುದು ಕಡ್ಡಾಯವಾಗಿರುತ್ತದೆ ಎಂದು ತಿಳಿಸಲಾಗಿದೆ.

ನಿರ್ದೇಶಕರು [ ಪ್ರೌಢ ಶಿಕ್ಷಣ ]ರವರ ಪರವಾಗಿ

ಇವರಿಗೆ

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ಇವರಿಗೆ ಮಾಹಿತಿಗಾಗಿ
2) ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುತ್ತಾ, ಸಂಬಂಧಿಸಿದ ಆಡಳಿತ ಮಂಡಳಿಯ ಮುಖ್ಯಸ್ಥರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಮ್ಮ ಹಂತದಲ್ಲಿಯೇ ಮೇಲ್ಕಂಡ ಸುತ್ತೋಲೆಯಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದೆ.
3) ಈ ಕಛೇರಿಯ ಇ-ಗೌರ್ನನ್ಸ್ ಶಾಖೆಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಇ-ಮೇಲ್ ಮೂಲಕ ಕಳುಹಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
4) ಕಛೇರಿ ಪ್ರತಿ.

z:\excess suttole.doc